(ಸಾಕ್ಷಿಗೆ ಕನ್ನಡ ಭಾಷೆ ಬರದ ಕಾರಣ ಶ್ರೀಮತಿ ಎನ್ ಟಿ ವಕೀಲರಿಂದ ಸಾಕ್ಷಿ ಹಿಂದಿ ಭಾಷೆಯಲ್ಲಿ ಹೇಳಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಲಾಯಿತು ಮತ್ತು ತರ್ಜುಮೆ ಮಾಡಿಸುವ ಮೊದಲು ಶ್ರೀಮತಿ ಎನ್ ಟಿ ವಕೀಲರಿಗೆ ಪ್ರಮಾಣ ವಚನ ಭೋಧಿಸಲಾಯಿತು.)

ದಿನಾಂಕಃ 16.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

5. ನನ್ನ ಮಗಳ ಶವವನ್ನು ನೋಡಿದರೆ ಗುರುತಿಸುತ್ತೇನೆ. ನಾನು ನನ್ನ ಮಗಳ ಶವವನ್ನು ಮೊದಲ ಬಾರಿಗೆ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿದ್ದೇನೆ.

6. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ನನ್ನ ಪ್ರತಿಭಾ ಜೈನ್ ರವರ ಶವ ಇರುವುದಾಗಿ ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಿಪಿ.2 ಎಂದು ಗುರುತಿಸಲಾಯಿತು. ನನ್ನ ಮಗಳ ತಲೆಯ ಕೂದಲು ಕೆದರಿತ್ತು, ಆಕೆಯ ತುಟಿ, ಕೆನ್ನೆ ಮತ್ತು ಕತ್ತಿನ ಭಾಗದಲ್ಲಿ ಕೈನಿಂದ ಕುತ್ತಿಯನ್ನು ಹಿಸುಕಿದಂತಹ ಗಾಯಗಳಾಗಿದ್ದವು ಮತ್ತು ಕೈಗಳ ಮೇಲೆ ಪರಚಿದ್ದ ಗಾಯಗಳಾಗಿದ್ದವು.

7. ನನ್ನ ಮಗಳ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅಂಜಲಿ ಕಟ್ ಡಿಸೈನಿನ ಬಂಗಾರದ ಚೈನ್ ಮತ್ತು ಸುರೇಶ್ ಎಂದು ಬರೆಯಲಾಗಿರುವ ಲಾಕೆಟ್ ನನ್ನು ನೋಡಿ ಗುರುತಿಸಿ ಅವುಗಳು ನನ್ನ ಮಗಳ ಒಡವೆಗಳೆಂದು ನುಡಿದಿರುತ್ತಾರೆ. ಅಂಜಲಿ ಕಟ್ ಡಿಸೈನಿನ ಬಂಗಾರದ ಚೈನನ್ನು ಮು.ಮಾ.1 ಎಂದು ಮತ್ತು ಬಿಳಿ ಮತ್ತು ಹಸಿರು ಬಣ್ಣದ ಕಲ್ಲುಗಳ ಮಧ್ಯದಲ್ಲಿ ಸುರೇಶ್ ಎಂದು ಹೆಸರಿರುವ

ಒಂದು ಬಂಗಾರದ ಡಾಲರನ್ನು ಮು.ಮಾ.2 ಎಂದು ಗುರುತಿಸಲಾಯಿತು.

8. ಸಾಕ್ಷಿಯು ಎರಡು ಬಂಗಾರದಂತಹ ಬಳೆಗಳನ್ನು ನೋಡಿ ಗುರುತಿಸಿ ಅವು ಸಹ ನನ್ನ ಮಗಳು ಪ್ರತಿಭಾ ಜೈನ್ ಳದ್ದಾಗಿದ್ದು ಆದರೆ ಅವು ರೋಲ್ಡ್ ಗೋಲ್ಡ್ ನವು ಎಂದು ನುಡಿದಿರುತ್ತಾರೆ. ಸದರಿ ಬಳೆಗಳನ್ನು ಒಟ್ಟಾಗಿ ಮು.ಮಾ.3 ಎಂದು ಗುರುತಿಸಲಾಯಿತು.

9. ದೂರು ನೀಡಿದ ಬಳಿಕ ದಿನಾಂಕ 02.05.2015 ರಂದು ಪೊಲೀಸರು ರಾಜಸ್ಥಾನದ ಬಿಕನೇರ್ ನಲ್ಲಿರುವ ನಮ್ಮ ಮನೆಗೆ ಬಂದು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದ್ದ ಒಡವೆಗಳು ನಮ್ಮ ಮಗಳಿಗೆ ಸೇರಿದ್ದೆ ಎಂದು ಖಚಿತಪಡಿಸಿಕೊಳ್ಳಲು ಬಂದಿದ್ದರು. ಆಗ ಅವರು ಮು.ಮಾ.1 ರಿಂದ 3 ಎಂದು ಗುರುತಿಸಲ್ಪಟ್ಟಿರುವ ಒಡವೆಗಳನ್ನು ತೋರಿಸಿದರು, ನಾನು ಅವುಗಳನ್ನು ನೋಡಿ ಗುರುತಿಸಿ ಅವು ನನ್ನ ಮಗಳಿಗೆ ಸೇರಿದ್ದವು ಎಂದು ಹೇಳಿರುತ್ತೇನೆ. ಆಗ ನಿತಿನ್ ಸಂಚೇತಿ ಮತ್ತು ರಾಜಶೇಖರ್ ರವರು ಸೇರಿಕೊಂಡು ನನ್ನ ಮಗಳನ್ನು ಕೊಲೆ ಮಾಡಿದ್ದಾಗಿ ಪೊಲೀಸರಿಂದ ತಿಳಿಯಿತು. ಆರೋಪಿತರು ನನ್ನ ಮಗಳನ್ನು ದುಡ್ಡಿಗಾಗಿ ಫ್ಯಾನಿಗೆ ನೇಣು ಹಾಕಿ ಕೊಲೆ ಮಾಡಿದ್ದಾಗಿ ಪೊಲೀಸರಿಂದ ತಿಳಿಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿ ಆತನೇ ನಿತಿನ್ ಸಂಚೇತಿ ಎಂದು ನುಡಿದಿರುತ್ತಾರೆ. 1 ನೇ ಆರೋಪಿ ನಿತಿನ್ ಸಂಚೇತಿ ನನ್ನ ಮಗಳ ಗಂಡನ ತಾಯಿಯ ಅಣ್ಣನ ಮಗ.

<u>ಪಾಟೀ ಸವಾಲುಃ ಶ್ರೀ ಐ ಎಸ್ ಟಿ ಆರೋಪಿತರ ಪರ ವಕೀಲರಿಂದಃ</u>

10. ಈ ಘಟನೆಯ ಬಳಿಕ ನೀವು ಉಚ್ಚನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ಅರ್ಜಿಯನ್ನು ನಾನು ಪೊಲೀಸರಿಂದ ಹೆಚ್ಚಿನ ತನಿಖೆಗಾಗಿ ಸಲ್ಲಿಸಿದ್ದೆನು. ಸದರಿ ಅರ್ಜಿಯನ್ನು ನೀವು ಪೊಲೀಸರು ತಪ್ಪು ತನಿಖೆಯನ್ನು ಮಾಡುತ್ತಿರುವುದಾಗಿ ಹೇಳಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮಗಳು ತೀರಿಕೊಳ್ಳುವ ಮೊದಲು ನೀವು ಚಿಕ್ಕಮಗಳೂರಿಗೆ ಎಷ್ಟು ಬಾರಿ ಬಂದಿದ್ದೀರಿ ಎಂದರೆ ಸಾಕ್ಷಿ ನಾನು ಲೆಕ್ಕ ಇಟ್ಟು ಕೊಂಡಿಲ್ಲ ಆದರೆ ಸುಮಾರು 5-6 ಬಾರಿ ಬಂದಿದ್ದೆನು ಮತ್ತು ನನ್ನ ಮಗಳು ಸಹ ನಮ್ಮ ಮನೆಗೆ ಬಂದು ಹೋಗುತ್ತಿದ್ದಳು.

11. ನನ್ನ ಮಗಳ ಗಂಡ ಮದುವೆಯ ಸಮಯದಲ್ಲಿ ಆಟೋ ಮೊಬೈಲ್ ಶಾಪ್ ನಡೆಸುತ್ತಿದ್ದನು. ನನ್ನ ಮಗಳ ಗಂಡ ಮೂಲತಃ ಚಿಕ್ಕಮಗಳೂರಿನವನಲ್ಲ. ನನ್ನ ಮಗಳ ಗಂಡ ಮೃತ ಪಟ್ಟ ಬಳಿಕ ನನ್ನ ಮಗಳು ಫೈನಾನ್ಸ್ ನಡೆಸುತ್ತಿದ್ದಳು, ರಿಯಲ್ ಎಸ್ಟೇಟ್ ಮತ್ತು ಶ್ರೀ ಸಾಯಿ ಮೆಡಿಕಲ್ಸ್ ನ್ನು ನಡೆಸುತ್ತಿದ್ದಳು. ವಿಜಯಪುರ ಆಂಜನೇಯ ದೇವಸ್ಥಾನದ ಎದುರು ನನ್ನ ಮಗಳ ಮನೆ ಇತ್ತು ಎಂದರೆ ಸರಿ. ನಿಮ್ಮ ಮಗಳ ಮನೆಯ ಸುತ್ತ ಮುತ್ತ ವಾಸದ ಮನೆಗಳು ಇದ್ದವು ಮತ್ತು ರೇಷನ್ ಅಂಗಡಿ ಸಹ ಇತ್ತು ಎಂದರೆ ಸರಿ. ನಿಮ್ಮ ಮಗಳು ಯಾವ ಯಾವ ವ್ಯಕ್ತಿಗಳೊಂದಿಗೆ ವ್ಯವಹಾರ ಮಾಡುತ್ತಿದ್ದಳು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ವ್ಯವಹಾರ ಮಾಡುತ್ತಿದ್ದಳು ಆದರೆ ನನಗೆ ಅದರ ವಿವರಗಳು ಗೊತ್ತಿಲ್ಲ ಎನ್ನುತ್ತಾರೆ. ಆಕೆಯ ಮನೆಗೆ ಯಾರು ಯಾರು

ಬಂದು ಹೋಗುತ್ತಿದ್ದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ.

12. ನನ್ನ ಮಗಳು ಮೃತಪಟ್ಟ ವಿಷಯವನ್ನು 9 ನೇ ತಾರೀಖಿನಂದು ನನಗೆ ನನ್ನ ಎರಡನೇ ಮಗಳು ಪ್ರೀತಿ ತಿಳಿಸಿದಳು. ಆಕೆ ಅಸ್ಸಾಂನಲ್ಲಿ ವಾಸವಾಗಿದ್ದಾಳೆ. ಅದೇ ದಿನ ಪೊಲೀಸರು ನನಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ ಆದರೆ ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಮಾರನೇ ದಿನ ಅಂದರೆ 10 ನೇ ತಾರೀಖಿನಂದು ನಾನು ಚಿಕ್ಕಮಗಳೂರಿಗೆ ಬಂದು ನೇರವಾಗಿ ಆಸ್ಪತ್ರೆಗೆ ಹೋಗಿದ್ದೇನೆ. ಆಗ ನನ್ನ ಮಗಳನ್ನು ಶವಾಗಾರದ ಶೈತ್ಯಾಗಾರದಲ್ಲಿ ಇರಿಸಲಾಗಿತ್ತು. ನಂತರ ಅದನ್ನು ಹೊರಗೆ ತೆಗೆದರು. ನನ್ನ ಮಗಳ ಮುಖದ ಮೇಲೆ ಉಗುರಿನಿಂದ ಪರಚಿದ ಗಾಯಗಳು ಆಗಿದ್ದವು. ಅವುಗಳನ್ನು ಹೊರತುಪಡಿಸಿ ಬೇರೆ ಗಾಯಗಳನ್ನು ನಾನು ನೋಡಿಲ್ಲ. ಆ ಸಮಯದಲ್ಲಿ ನಿಮ್ಮ ಮಗಳ ಉಗುರು ಎಷ್ಟು ಉದ್ದವಾಗಿತ್ತು ಎಂದರೆ ಸಾಕ್ಷಿ ಆಕೆಯ ಉಗುರುಗಳು ಸಾಮಾನ್ಯವಾಗಿದ್ದವು, ಹೆಚ್ಚಿಗೆ ಉದ್ದ ಬೆಳೆದಿರಲಿಲ್ಲ ಎನ್ನುತ್ತಾರೆ. ನಿಮ್ಮ ಮಗಳ ಉಗುರುಗಳನ್ನು ನೋಡಿದ ಬಗ್ಗೆ ಅಥವಾ ಅವರು ನಿಮ್ಮ ಮಗಳ ಉಗುರುಗಳನ್ನು ನಿಮಗೆ ತೋರಿಸಿದ ಬಗ್ಗೆ ಹೇಳಿಕೆ ಪಡೆದುಕೊಂಡಿದ್ದಾರೆಯೇ ಎಂದರೆ ಇಲ್ಲ ಎನ್ನುತ್ತಾರೆ.

13.ನೀವು ಆ ಸಮಯದಲ್ಲಿ ದುಃಖದಿಂದ ಇದ್ದ ಕಾರಣ ನಿಮ್ಮ ಮಗಳ ಶವ ಯಾವ ರೀತಿ ಇತ್ತು ಎಂದು ನೀವು ಸರಿಯಾಗಿ ಗಮನಿಸಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಆದರೆ ಆಗ ನನ್ನ ಮಗಳ

ಶವವನ್ನು ಪೊಲೀಸರು ನನಗೆ ನೀಡಿದ ಸಮಯದಲ್ಲಿ ನನ್ನಿಂದ ರಶೀದಿಯನ್ನು ಪಡೆದುಕೊಂಡಿದ್ದಾರೆ. ಆ ಸಮಯದಲ್ಲಿ ಪೊಲೀಸರು ನನಗೆ ಯಾವುದೇ ನೋಟೀಸನ್ನು ನೀಡಿಲ್ಲ. ಮಾರನೇ ದಿನ ನನ್ನ ಮಗಳ ಅಂತ್ಯ ಸಂಸ್ಕಾರವನ್ನು ಚಿಕ್ಕಮಗಳೂರಿನಲ್ಲಿ ನಡೆಸಿರುತ್ತೇನೆ. ನಂತರ ನಾನು 20-22 ದಿನ ಚಿಕ್ಕಮಗಳೂರಿನಲ್ಲಿಯೇ ಉಳಿದುಕೊಂಡಿದ್ದೆನು. ಆ ಅವಧಿಯಲ್ಲಿ ಪೊಲೀಸರು ನಿಮ್ಮ ಹೇಳಿಕೆಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿಯು ಲಿಖಿತವಾಗಿ ಪಡೆದುಕೊಂಡಿಲ್ಲ ಆದರೆ ವಿಚಾರಿಸುತ್ತಿದ್ದರು ಎನ್ನುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ

(ಸಾಕ್ಷಿಗೆ ಕನ್ನಡ ಭಾಷೆ ಬರದ ಕಾರಣ ಶ್ರೀಮತಿ ಎನ್ ಟಿ ವಕೀಲರಿಂದ ಸಾಕ್ಷಿ ಹಿಂದಿ ಭಾಷೆಯಲ್ಲಿ ಹೇಳಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಲಾಯಿತು ಮತ್ತು ತರ್ಜುಮೆ ಮಾಡಿಸುವ ಮೊದಲು ಶ್ರೀಮತಿ ಎನ್ ಟಿ ವಕೀಲರಿಗೆ ಪ್ರಮಾಣ ವಚನ ಭೋಧಿಸಲಾಯಿತು.)

ದಿನಾಂಕಃ 16.07.2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಐ ಎಸ್ ಟಿ ಆರೋಪಿತರ ಪರ ವಕೀಲರಿಂದಃ</u>

14. ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿಯ ಬಗ್ಗೆ ಪೊಲೀಸರು ನಿಮಗೆ ತಿಳಿಸುವ ಮೊದಲು ನೀವು ಆತನನ್ನು ನೋಡಿರಲಿಲ್ಲ ಎಂದರೆ ಸರಿ. 1 ನೇ ಆರೋಪಿಯ ಬಗ್ಗೆ ನಾನು ಇಲ್ಲಿಯವರೆಗೆ ಪೊಲೀಸರಿಗೆ ಏನನ್ನೂ ತಿಳಿಸಿಲ್ಲ ಎಂದರೆ ಸರಿ. ಪೊಲೀಸರು 1 ನೇ ಆರೋಪಿಯ ಬಗ್ಗೆ ತಿಳಿಸಿದ ಮೇರೆಗೆ ಮೊದಲ ಬಾರಿಗೆ ಆತನ ಬಗ್ಗೆ ನಾನು ನ್ಯಾಯಾಲಯದಲ್ಲಿ ತಿಳಿಸಿದ್ದೇನೆ. 1 ನೇ ಆರೋಪಿಯನ್ನು ನಾನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿಯೇ ನೋಡಿದ್ದೇನೆ ಎಂದರೆ ಸರಿ. ಪೊಲೀಸರ ಮಾತು ಕೇಳಿ 1 ನೇ ಆರೋಪಿಯೇ ಕೊಲೆಗಾರನೆಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ